ಇ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು? ಈ ಪೈಕಿ ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡವಿದೆ? (ತಾಲ್ಲೂಕುವಾರು ಮಾಹಿತಿ ನೀಡುವುದು).

ಈ) ಉಳಿದ ಕೇಂದ್ರಗಳಿಗೆ ಸ್ವಂತ ಕಟ್ಟಡ ಹೊಂದಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 40301 ಅಂಗನವಾಡಿ ಕೇಂದ್ರಗಳಿವೆ.

ಆ) 20904 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿರುತ್ತವೆ.

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ 1202. ಈ ಪೈಕಿ 769 ಕೇಂದ್ರಗಳಿಗೆ ಸ್ವಂತ ಕಟ್ಟಡವಿರುತ್ತದೆ. (ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.)

ಈ) ಉಳಿದ ಕೇಂದ್ರಗಳಿಗೆ ಅನುದಾನದ ಲಭ್ಯತೆಯ ಮೇರೆಗೆ ಹಂತ ಹಂತವಾಗಿ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು.

Annexure

Sl. No.	Name of the blocks:project	No. of AWC sanctioned	Own Buildings
1.	Karwar	101	85
2.	Ankola	100	99
3.	Kumta	129	114
4.	Honnavar	146	34
5.	Bhatkal	128	95
6.	Sirsi	153	37
7.	Siddapur	91	58
8.	Yellapur	85	78
9.	Haliyal	94	31
10.	Mundgod	75	43
11.	Joida	100	95
	Total	**1202**	**769**

ಶಿವಮೊಗ್ಗ ಜಿಲ್ಲೆಯ ಕೊಲ್ಲಿ ಬಚ್ಚಲು ಜಲಾಶಯ ಯೋಜನೆ

773(928) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕೊಲ್ಲಿಬಚ್ಚಲು ಜಲಾಶಯ ಯೋಜನೆಯ ಅಂದಾಜು ವೆಚ್ಚವೆಷ್ಟು?

ಆ) ಈ ಯೋಜನೆಯಲ್ಲಿ ಪ್ರಸ್ತಾಪಿತ ಕಾಮಗಾರಿಗಳು ಯಾವುವು? (ಯೋಜನೆಯ ನವೀಕೃತ ಪ್ರಸ್ತಾವನೆ ಪ್ರತಿ ಒದಗಿಸುವುದು).

ಇ) ಈ ಯೋಜನೆ ಈಗ ಯಾವ ಹಂತದಲ್ಲಿದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :

ಅ) ಸಾಗರ ತಾಲ್ಲೂಕಿನ ಗಿಳಾಲಗುಂದಿ ಗ್ರಾಮದ ಹತ್ತಿರ ಕೊಳ್ಳಿಬಚ್ಚಲು ಹಳ್ಳಕ್ಕೆ ಅಡ್ಡಲಾಗಿ ಹೊಸಕೆರೆಯ ನಿರ್ಮಾಣ ಕಾಮಗಾರಿಯ ಅಂದಾಜನ್ನು 1997-98ನೇ ಸಾಲಿನ ದರಗಳಂತೆ ರೂ.74 ಲಕ್ಷಗಳಿಗೆ ತಯಾರಿಸಲಾಗಿದ್ದು ಮಂಜೂರಾತಿಯನ್ನು ನೀಡಲಾಗಿರುತ್ತದೆ.

ಆ) ಈ ಯೋಜನೆಯಲ್ಲಿ ಅಣೆಕಟ್ಟನ್ನು ನಿರ್ಮಿಸಿ ಈ ಅಣೆಕಟ್ಟಿನ ಎರಡು ಪಾರ್ಶ್ವಗಳಲ್ಲಿ ಕಟ್ಟಡದೊಳಗೆ 450 ಮಿ.ಮೀ ಪೈಪುಗಳನ್ನು ಅಳವಡಿಸಿ ತೂಬುಗಳನ್ನು ನಿರ್ಮಾಣ ಮಾಡುವುದು. ಅಲ್ಲದೆ ಬಲದಂಡೆಯಲ್ಲಿ 6 ಕಿ.ಮೀ. ಉದ್ದದ ನಾಲೆ ನಿರ್ಮಿಸಿ 560 ಎಕರೆ ಅಚ್ಚುಕಟ್ಟು ಪ್ರದೇಶಕ್ಕೂ ಎಡದಂಡೆ 4 ಕಿ.ಮೀ. ಉದ್ದ ನಾಲೆ ನಿರ್ಮಿಸಿದ್ದು 440 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಮಾಡಲು ಅವಕಾಶ ಮಾಡಲಾಗಿದೆ.

ಈ ಯೋಜನೆಯಲ್ಲಿ ಕೋಡಿಯ ಉದ್ದವು 34ಮೀ (ಕ್ಲೀಯರ್) ಆಗಿದ್ದು ಈ ಸ್ಥಳವು ಕಲ್ಲುಗಳಿಂದ ಕೂಡಿದ ತಳವನ್ನು ಹೊಂದಿರುವ ಕಾರಣ ಕೋಡಿಯನ್ನು ಅಣೆಕಟ್ಟಾಗಿ ವಿನ್ಯಾಸಗೊಳಿಸಲಾಗಿದೆ.

ಈ ಯೋಜನೆಯ ಅಂದಾಜನ್ನು ಇನ್ನು ನವೀಕೃತಗೊಳಿಸಿರುವುದಿಲ್ಲ.

ಇ) ಈ ಕಾಮಗಾರಿಯನ್ನು ಗುತ್ತಿಗೆ ಆಧಾರದ ಮೇಲೆ 97-98ನೇ ಸಾಲಿನಲ್ಲಿ ಮಹಿಸಲಾಗಿದ್ದು, ಈ ಕಾಮಗಾರಿಯ ಬಗ್ಗೆ ಕೆಲವು ಸಾರ್ವಜನಿಕರು ಅರಣ್ಯ ಪರಿಸರ ಕಾಪಾಡುವ ಬಗ್ಗೆ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಹಾಕಿದ್ದರು. ಆ ನಂತರ ಉಚ್ಚ ನ್ಯಾಯಾಲಯವು ಈ ಅರ್ಜಿಯನ್ನು ರದ್ದುಪಡಿಸಿರುತ್ತದೆ. ಸದರಿ ಕಾಮಗಾರಿಯ ನಿರ್ಮಾಣದಿಂದ ಮುಳುಗಡೆಯಾಗುವ 8 ಎಕರೆ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಲು ರೂ. 429417-00 ಗಳನ್ನು ಅರಣ್ಯ ಇಲಾಖೆಗೆ ಪಾವತಿ ಮಾಡಲಾಗಿದೆ. ಅರಣ್ಯ ಇಲಾಖೆಯಿಂದ ಜಮೀನು ಬಿಡುಗಡೆಯಾದ ನಂತರ ಕಾಮಗಾರಿಯನ್ನು ನಿಯಮಾನುಸಾರ ಕೈಗೆತ್ತಿಕೊಳ್ಳಲಾಗುವುದು.

ನ್ಯಾಯಾಂಗ ಇಲಾಖೆಯ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರುಗಳಿಗೆ ಹಂಚಿಕೆ ಮಾಡಿರುವ ನಿವೇಶನ

774(1110) ಶ್ರೀ ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯ ನ್ಯಾಯಾಂಗ ಇಲಾಖೆ ನೌಕರರ ಗೃಹನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ಹಂಚಿಕೆ ಮಾಡಿರುವ ಒಟ್ಟು ನಿವೇಶನಗಳು ಮತ್ತು ಅವರ ಹೆಸರುಗಳನ್ನು ಒದಗಿಸುವುದು?